"ನೀರು ಉಳಿಸಿ – ಬೆಂಗಳೂರು ಉಳಿಸಿ"

ವೆಬ್ ಸೈಟ್:WWW. bwssb.gov.in
ಇ-ಮೇಲ್:cao-s@bwssb.gov.in

ದೂರವಾಣಿ: 080-22945102
ಫ್ಯಾಕ್ಸ್ : 080-22945102

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

# BANGALORE WATER SUPPLY AND SEWERAGE BOARD

1ನೇ ಮಹಡಿ, ಕಾವೇರಿ ಭವನ, ಬೆಂಗಳೂರು -560 009

ನಂ.ಬೆಂಜಮಂ/ಮು.ಆ.ಅ-ಕಾ-113/258/996 /2019-20 ದಿ: 04.02.2020

ಕಾರ್ಯನಿವಾಹಕ ನಿರ್ವಾಹಕ ಅಭಿಯಂತರರು(ಎಂ.ಐ.ಎಸ್&ಐ.ಟಿ)
7ನೇ ಮಹಡಿ, ಕಾವೇರಿ ಭವನ,
ಬೆಂಗಳೂರು ಜಲಮಂಡಳಿ,
ಬೆಂಗಳೂರು.

ವಿಷಯ : ಬೆಂಗಳೂರಿನಿಂದ 90 ಕಿ.ಮೀ. ದೂರದಲ್ಲಿರುವ ತೊರೆಕಾಡನಹಳ್ಳಿ ಕಾವೇರಿ ನೀರು ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಲು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಒಂದು ದಿನದ ಅಧ್ಯಯನ ಪ್ರವಾಸವನ್ನು ಆಯೋಜಿಸಿರುವ ಕುರಿತ ಮಾಹಿತಿಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಕುರಿತು.

*****

ಬೆಂಗಳೂರು ಜಲಮಂಡಳಿಯು ನಗರಕ್ಕೆ ಕಾವೇರಿ ನೀರು ಸರಬರಾಜು ಮಾಡಲು ತೊರೆಕಾಡನಹಳ್ಳಿಯಲ್ಲಿ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಿರುತ್ತದೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಕಾರ್ಯದ ಬಗ್ಗೆ ಅರಿವು ಮೂಡಿಸುವ ಸಂಬಂಧ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಕಾವೇರಿ ಭವನದ ಕೇಂದ್ರ ಕಛೇರಿಯಿಂದ ತೊರೆಕಾಡನಹಳ್ಳಿಗೆ ಸಾರಿಗೆ ಬಸ್ ಮುಖಾಂತರ ಒಂದು ದಿನದ ಅಧ್ಯಯನ ಪ್ರವಾಸವನ್ನು ಪ್ರತಿ ಶನಿವಾರ & ಭಾನುವಾರದಂದು ಆಯೋಜಿಸಲಾಗಿರುತ್ತದೆ.

**ಪ್ರವಾಸ ಕಾರ್ಯಕ್ರಮದ ವಿವರ ಈ ಕೆಳಕಂಡಂತಿರುತ್ತದೆ.**

- 10ನೇ ತರಗತಿಯಿಂದ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ.
- ವಿದ್ಯಾರ್ಥಿಗಳು ಪ್ರಯಾಣಿಸಲು ಬಸ್‌ನ ವ್ಯವಸ್ಥೆಯನ್ನು ಶಾಲೆಯಿಂದಲೇ ಮಾಡಿಕೊಳ್ಳುವುದು.
- ಒಂದು ಬಸ್‌ನಲ್ಲಿ 25 ರಿಂದ 50 ವಿದ್ಯಾರ್ಥಿಗಳು ಪ್ರಯಾಣ ಮಾಡಬಹುದಾಗಿದ್ದು, ಕನಿಷ್ಠ ಇಬ್ಬರು ಶಿಕ್ಷಕರು ವಿದ್ಯಾರ್ಥಿಗಳ ಉಸ್ತುವಾರಿಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ.
  ಅಧ್ಯಯನ ಪ್ರವಾಸ ಕೈಗೊಳ್ಳುವ ಶಾಲಾ ಕಾಲೇಜುಗಳ ಮತ್ತು ವಿದ್ಯಾರ್ಥಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್ **www. bwssb.gov.in** ಮೂಲಕ ನೊಂದಣಿ ಮಾಡಿಸಿ ದಿನಾಂಕವನ್ನು ನಿಗದಿಪಡಿಸಿಕೊಳ್ಳಬೇಕು. ಒಂದು ಪಕ್ಷ ನಿಗಧಿಪಡಿಸಿರುವ ದಿನಾಂಕದಂದು ಪ್ರಯಾಣಿಸಲು ಸಾಧ್ಯವಾಗದ ಪಕ್ಷದಲ್ಲಿ ಮುಂಚಿತವಾಗಿಯೇ ಮಂಡಳಿಯ ಅಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಿ ಅಧ್ಯಯನ ಪ್ರವಾಸದ ದಿನಾಂಕವನ್ನು ಮುಂದೂಡುವ ಅವಕಾಶವಿರುತ್ತದೆ.
- ಅಧ್ಯಯನ ಪ್ರವಾಸವನ್ನು ಪ್ರತಿ ಶನಿವಾರ & ಭಾನುವಾರದಂದು ಆಯೋಜಿಸಲಾಗಿರುತ್ತದೆ.
- ಪ್ರತಿ ಶನಿವಾರ & ಭಾನುವಾರದಂದು ಒಟ್ಟು 4 ಬಸ್‌ಗಳು ತೆರಳಲು ಅವಕಾಶವಿರುತ್ತದೆ.
- ಬೆಳಗ್ಗೆ:08:30 ಗಂಟೆಗೆ ಕಾವೇರಿ ಭವನದ ಕೇಂದ್ರ ಕಛೇರಿಯಿಂದ ಬಸ್ ಹೊರಟು, ಬೆಳಗ್ಗೆ:10:30 ಗಂಟೆಗೆ ತೊರೆಕಾಡನಹಳ್ಳಿಯನ್ನು ಬಸ್ ತಲುಪುವುದು.

- ಬೆಳಗ್ಗೆ 11.00 ರಿಂದ 11.30 ರವರೆಗೆ ಕಾವೇರಿ ಯೋಜನೆಯ 4ನೇ ಹಂತದ 2ನೇ ಘಟ್ಟದ ವಿಚಾರ ಸಂಕೀರ್ಣ ಪ್ರಾಂಗಣದಲ್ಲಿ ವಿದ್ಯಾರ್ಥಿಗಳಿಗೆ ಕಾವೇರಿ ನೀರು ಸರಬರಾಜು ಯೋಜನೆಯ ಮತ್ತು ತ್ಯಾಜ್ಯ ನೀರು ಸಂಸ್ಕರಣೆಯ ಬಗ್ಗೆ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಗುವುದು
- ಬೆಳಗ್ಗೆ:11:30ಕ್ಕೆ ಪ್ರತಿ 25 ವಿದ್ಯಾರ್ಥಿಗಳಿಗೆ ಒಬ್ಬ ಮಾರ್ಗದರ್ಶಕರಂತೆ ಶುದ್ಧೀಕರಣ ಘಟಕವನ್ನು ವೀಕ್ಷಿಸಲು ನಿಯೋಜಿಸಲಾಗುತ್ತದೆ.
- ವೀಕ್ಷಣೆಯ ಅವಧಿಯು ಬೆಳಗ್ಗೆ:11:30 ರಿಂದ ಮಧ್ಯಾಹ್ನ :01:00 ಗಂಟೆ ಮುಕ್ತಾಯಗೊಳ್ಳುತ್ತದೆ.
- ಮಧ್ಯಾಹ್ನ:01:00 ಗಂಟೆಗೆ ತೊರೆಕಾಡನಹಳ್ಳಿಯ ನೀರು ಸಂಸ್ಕರಣ ಘಟಕದ ಆವರಣದಲ್ಲಿರುವ ಹಳೆಯ ಪ್ರವಾಸಿ ಮಂದಿರದಲ್ಲಿ ವಿದ್ಯಾರ್ಥಿಗಳು ಹಣ ಪಾವತಿಸಿ ಊಟವನ್ನು ತೆಗೆದುಕೊಳ್ಳಬಹುದಾಗಿರುತ್ತದೆ.
- ಮಧ್ಯಾಹ್ನ:02:30ಕ್ಕೆ ತೊರೆಕಾಡನಹಳ್ಳಿಯಿಂದ ಬಸ್ ಹೊರಟು ಸಂಜೆ:04:30ಕ್ಕೆ ಕಾವೇರಿ ಭವನದ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ತಲುಪಬಹುದು. ಇಲ್ಲಿಗೆ ಒಂದು ದಿನದ ಅಧ್ಯಯನ ಪ್ರವಾಸ ಮುಕ್ತಾಯಗೊಳ್ಳುತ್ತದೆ.
- ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳುವ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿಯಾದ ಶ್ರೀ. ಬಿ.ಎಂ ಮಂಜುನಾಥ್ ರವರನ್ನು ಸಂಪರ್ಕಿಸುವುದು. ಮೊ.ಸಂ. 9845444015

ಈ ಪ್ರವಾಸದಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಬೆಂಗಳೂರು ನಗರಕ್ಕೆ ಸರಬರಾಜಾಗುವ ನೀರಿನ ಪಯಣ ಹಾಗೂ ನೀರಿನ ಮಹತ್ವದ ಬಗ್ಗೆ ಅರಿಯಲು ಸಹಾಯವಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮದಲ್ಲಿ ಶಾಲಾ ಕಾಲೇಜುಗಳು ಭಾಗವಹಿಸಲು ಮತ್ತು ಸೂಚಿಸಿದ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ನೊಂದಣಿ ಮಾಡಿಕೊಳ್ಳಲು ಸಹಾಯವಾಗಲು ಸದರಿ ಮಾಹಿತಿಯ Soft copy ಯನ್ನು ಮಂಡಳಿಯ ವೆಬ್‌ಸೈಟ್ (www.bwssb.gov.in) ನಲ್ಲಿ ಅಪ್‌ಲೋಡ್ ಮಾಡಲು ಕೋರಲಾಗಿದೆ.

03/2/2020

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ,
ಬೆಂಗಳೂರು ಜಲಮಂಡಳಿ

"ನೀರು ಉಳಿಸಿ – ಬೆಂಗಳೂರು ಉಳಿಸಿ"

## ಅನುಬಂಧ

ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳಲು ಈ ಕೆಳಕಂಡ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸತಕ್ಕದ್ದು.

| | |
|---|---|
| **ವಿದ್ಯಾ ಸಂಸ್ಥೆಯ ಹೆಸರು ಮತ್ತು ವಿಳಾಸ** | |
| **ಪ್ರವಾಸದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ** | |
| **ವಿದ್ಯಾರ್ಥಿಗಳ ವ್ಯಾಸಂಗ ಮಾಡುತ್ತಿರುವ ತರಗತಿಯ ವಿವರ** | |
| **ಪ್ರವಾಸದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಉಸ್ತುವಾರಿ ನೋಡಿಕೊಳ್ಳುವ ಶಿಕ್ಷಕರ ವಿವರ (೫೦ ವಿದ್ಯಾರ್ಥಿಗಳಿಗೆ ಕನಿಷ್ಠ ಇಬ್ಬರು ಶಿಕ್ಷಕರು)** | |
| **ಪ್ರವಾಸದಲ್ಲಿ ಪಾಲ್ಗೊಳ್ಳುವ ದಿನಾಂಕ** | |

(ಸಹಿ/–)

ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು

### ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳುವ ಶಾಲಾ/ಕಾಲೇಜುಗಳಿಗೆ ಮಾರ್ಗಸೂಚಿಗಳು

- 10ನೇ ತರಗತಿಯಿಂದ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ.
- ವಿದ್ಯಾರ್ಥಿಗಳು ಪ್ರಯಾಣಿಸಲು ಬಸ್‌ನ ವ್ಯವಸ್ಥೆಯನ್ನು ಶಾಲೆ/ಕಾಲೇಜಿನಿಂದಲೇ ಮಾಡಿಕೊಳ್ಳುವುದು.
- ಅಧ್ಯಯನ ಪ್ರವಾಸ ಕೈಗೊಳ್ಳುವ ಶಾಲಾ ಕಾಲೇಜುಗಳ ಮತ್ತು ವಿದ್ಯಾರ್ಥಿಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಭರ್ತಿಮಾಡಿ ಮಂಡಳಿಯ ವೆಬ್‌ಸೈಟ್ **www. bwssb.gov.in** ನಲ್ಲಿ ಸಲ್ಲಿಸುವುದರ ಮೂಲಕ ನೊಂದಣಿ ಮಾಡಿಕೊಳ್ಳಬೇಕು.
- ಅಧ್ಯಯನ ಪ್ರವಾಸವನ್ನು ಪ್ರತಿ ಶನಿವಾರ & ಭಾನುವಾರದಂದು ಆಯೋಜಿಸಲಾಗುತ್ತದೆ.
- ಬೆಳಗ್ಗೆ:08:30 ಗಂಟೆಗೆ ಕಾವೇರಿ ಭವನದ ಕೇಂದ್ರ ಕಛೇರಿಯಿಂದ ಬಸ್ ಹೊರಟು, ಬೆಳಗ್ಗೆ:10:30 ಗಂಟೆಗೆ ತೊರೆಕಾಡನಹಳ್ಳಿಯನ್ನು ಬಸ್ ತಲುಪುವುದು.
- ವೀಕ್ಷಣೆಯ ಅವಧಿಯು ಬೆಳಗ್ಗೆ:11:30 ರಿಂದ ಪ್ರಾರಂಭಗೊಂಡು ಮಧ್ಯಾಹ್ನ :01:00 ಗಂಟೆಗೆ ಮುಕ್ತಾಯಗೊಳ್ಳುತ್ತದೆ.
- ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಸಂಪೂರ್ಣ ಉಸ್ತುವಾರಿಯನ್ನು ಸಂಬಂಧಪಟ್ಟ ಶಾಲಾ/ಕಾಲೇಜಿನ ಶಿಕ್ಷಕರೇ ತೆಗೆದುಕೊಳ್ಳಬೇಕು.
- ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳುವ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿಯಾದ ಶ್ರೀ. ಬಿ.ಎಂ ಮಂಜುನಾಥ್ ರವರನ್ನು ಸಂಪರ್ಕಿಸುವುದು. ಮೊ.ಸಂ. 9845444015